## ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಮಾನವಿ

| CC No. | 335/2024 |
|---|---|

**CW 9 : PW 7**

ದಿನಾಂಕ 16-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

| | |
|---|---|
| ಹೆಸರು | Guruchandra |
| ತಂದೆಯ ಹೆಸರು | Raghanna |
| ವಯಸ್ಸು | 59 ವರ್ಷ |
| ಉದ್ಯೋಗ | PSI, Kavital PS |
| ವಾಸಸ್ಥಳ | Kavital |

**ಮುಖ್ಯ ವಿಚಾರಣೆಃ** ಸ.ಸ.ಅ. ಅವರಿಂದಃ

ದಿ:19-07-2023 ರಿಂದ 12-02-2024 ವರೆಗೆ ನಾನು ಸಿರವಾರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದ ಕುರಿತಂತೆ ದಿ : 31-12-2023 ರಂದು ಸಂಃ 05.00 ಗಂಟೆಗೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ನಿಪಿ-1 ರಡಿಯಲ್ಲಿರುವ ಲಿಖಿತ ದೂರನ್ನು ಮತ್ತು ನನ್ನ ಮುಂದೆ ನೀಡಿದ್ದು ಅದನ್ನು ಸ್ವೀಕರಿಸಿಕೊಂಡು ಪ್ರ.ವ.ವರದಿ ತಯಾರಿಸಿ ಅದನ್ನು ಗು.ನಂ. 164/2023 ರಲ್ಲಿ ದಾಖಲು ಮಾಡಿಕೊಂಡು, ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ.

ನಂತರ ತನಿಖೆಯನ್ನು ಮುಂದುವರೆಸಿ ದಿ:01-01-2024 ಪಂಚನಾಮೆಗಿಂತ ಮುಂಚೆ ಚಾಸಾ-1 ರವರ ಘಟನಾ ಸ್ಥಳಕ್ಕೆ ಕುರಿತಂತೆ ನೀಡಿದ ಮರುಹೇಳಿಕೆಯನ್ನು ಪಡೆದುಕೊಂಡು ನಂತರ ಅದೇ ದಿನ ಬೆ-10-30 ರಿಂದ 11-30 ಗಂಟೆ ಸಮಯದಲ್ಲಿ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-6 ಮತ್ತು 7 ರವರ ಸಮಕ್ಷಮ ಸ್ಥಳಪಂಚನಾಮೆಯನ್ನು ಮಾಡಿ ಸ್ಥಳದಲ್ಲಿ ಸಿಕ್ಕ ಹಿಡಿ ಗಾತ್ರದ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ.

ನಂತರ ಸಾಕ್ಷಿದಾರರಾದ ಚಾಸಾ-2 ರಿಂದ 5 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಅಮಾನತ್ತು ಪಡಿಸಿಕೊಂಡ ಕಲ್ಲನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿತರಿಗೆ ನೋಟಿಸನ್ನು ನೀಡಿ ಅವರನ್ನು ತನಿಖೆ ಮಾಡಿ ಅವರ ಸ್ವ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ದಿ:07-01-2024 ರಂದು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿ ಸದರಿ ಪ್ರಕರಣದಲ್ಲಿ ಉಲ್ಲೇಖಿಸಿರುವ ಆರೋಪಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಆತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಈಗ ನಾನು ಚಾಸಾ-1 ರವರಿಂದ ಆ ದಿನ ಸ್ವೀಕರಿಸಿದ ದೂರನ್ನು ನೋಡುತ್ತಿದ್ದೇನೆ ಅದರ ಮೇಲೆ ನನ್ನ ಸಹಿ ಇದ್ದು ಅದನ್ನು ಸಹ ಗುರುತಿಸಿರುತ್ತೇನೆ. ಸಾಕ್ಷಿದಾರರು ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುವುದರಿಂದ ದೂರನ್ನು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಆ ದಿನ ನಾನು ದಾಖಲಿಸಿದ ಪ್ರ.ವ.ವರದಿಯನ್ನು ನೋಡುತ್ತಿದ್ದೇನೆ ಅದರ ಮೇಲೆ ನನ್ನ ಸಹಿ ಇದೆ. ಸಾಕ್ಷಿದಾರರು ಸದರಿ ಪ್ರ.ವ.ವರದಿಯನ್ನು ಮತ್ತು ಅವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-7 ಎಂದು ಮತ್ತು ಸಾಕ್ಷಿದಾರರ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಈಗ ನಾನು ಜರುಗಿಸಿದ ಸ್ಥಳ ಮಹಜರನ್ನು ನೋಡುತ್ತಿದ್ದೇನೆ ಅದರ ಮೇಲೆ ನನ್ನ ಸಹಿ ಇದ್ದು ಅದನ್ನು ಸಹ ಗುರುತಿಸಿರುತ್ತೇನೆ. ಈಗಾಗಲೇ ಅದನ್ನು ನಿಪಿ2 ಎಂದು ಗುರುತಿಸಿರುವುದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ನಾನು ಆಸ್ಪತ್ರೆಯಿಂದ ಪಡೆದುಕೊಂಡ ಗಾಯಾಳುವಿನ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳ ಮೇಲೆ ನನ್ನ ಸಹಿ ಇದ್ದು ಅವುಗಳನ್ನು ಸಹ ಗುರುತಿಸಿರುತ್ತೇನೆ. ಅವುಗಳನ್ನು ನಿಪಿ-8 ಮತ್ತು 9 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 9(ಎ) ಎಂದು ಗುರುತಿಸಲಾಯಿತು.

ಆ ದಿನ ನಾನು ಮಹಜರಿನ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ಕಲ್ಲನ್ನು ನೋಡಿ ಗುರುತಿಸಿರುತ್ತೇನೆ. ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

ನನ್ನ ಮುಂದೆ ಯಾವುದೇ ಸಾಕ್ಷಿದಾರರು ನಿಪಿ-3 ರಿಂದ 6 ರಂತೆ ಹೇಳಿಕೆ ನೀಡಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿಯ ವಿರುದ್ಧ ರಾಜಕೀಯ ಉದ್ದೇಶದಿಂದ ಸುಳ್ಳು ದೂರನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿರುವ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಂತವು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಠಾಣೆಯಲ್ಲಿ ಕುಳಿತು ಸುಳ್ಳು ಪ್ರಕರಣವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮುಂದೆ ಯಾವುದೇ ಸಾಕ್ಷಿದಾರರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ತನಿಖೆ ನಡೆಸಿ, ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಸಾಕ್ಷಿದಾರರು ನಿಪಿ-3 ರಿಂದ 6 ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಮರು-ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಮಾನವಿ.